ಸಿ. ಸಿ. ನಂ.- **1132/2023**

ಸಿ.ಡಬ್ಲ್ಯೂ.- **3** / ಪಿ.ಡಬ್ಲ್ಯೂ.- **3**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ **15-05-2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಶಿವಕುಮಾರ್ |
| ತಂದೆಯ ಹೆಸರು - | ಚಂದ್ರಪ್ಪ |
| ವಯಸ್ಸು - | **25** ವರ್ಷಗಳು |
| ಉದ್ಯೋಗ - | ಗ್ಯಾರೇಜ್ ಕೆಲಸ |
| ವಾಸಸ್ಥಳ - | ಬಸಾಪುರ , ಕೊಪ್ಪಳ ತಾಲ್ಲೂಕು , ಕೊಪ್ಪಳ ಜಿಲ್ಲೆ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಆರೋಪಿ **1** ಮತ್ತು ಚಾಸಾ **2** ರವರನ್ನು ನೋಡಿದ್ದೇನೆ . **2** ನೇ ಆರೋಪಿ ರವರನ್ನು ನಾನು ನೋಡಿಲ್ಲ . **15.08.2023** ರಂದು ಗ್ಯಾರೇಜ್ ಕೆಲಸ ಮುಗಿಸಿಕೊಂಡು ಬೈಕಿನಲ್ಲಿ ಮನೆಗೆ ಹೋಗುತ್ತಿರುವಾಗ ಸುಮಾರು ಬೆಳಗ್ಗೆ **11.00** ಗಂಟೆಗೆ ನನ್ನ ಮುಂದೆ ಒಂದು ಕಾರ್ ಓವರ್ ಟೇಕ್ ಮಾಡಿಕೊಂಡು ಹೋಯಿತು, ಅದರ ಹಿಂದೆ ಒಂದು ಆರ್ ಎಕ್ಸ್ ಬೈಕ್ ಸಹ ವೇಗವಾಗಿ ಹೋಯಿತು. ನಂತರ ಕಾರ್ ಚಾಲಕ ಒಮ್ಮೆಲೆ ಬ್ರೇಕ್ ಹಾಕಿದರು . ಅದನ್ನು ನೋಡಿ ಬೈಕ್ ಚಾಲಕ ಸಹ ಬ್ರೇಕ್ ಹಾಕಿದರು ಆದರೆ ಬೈಕ್ ನಿಯಂತ್ರಣಕ್ಕೆ ಬರಲಿಲ್ಲ . ಆಗ ಬೈಕ್ ಕಾರಿಗೆ ಡಿಕ್ಕಿ ಪಡಿಸಿತು . ಆಗ ಬೈಕ್ ಚಾಲಕನಿಗೆ ಸ್ವಲ್ಪ ಪೆಟ್ಟುಗಳು ಆಗಿದ್ದು ತಲೆಯಿಂದ ರಕ್ತ ಸೋರುತ್ತಿತ್ತು ಮತ್ತು ಕಾಲಿಗೆ ಗಾಯವಾಗಿತ್ತು . ಆಗ ಕಾರ್ ಚಾಲಕ ಕಾರನ್ನು ನಿಲ್ಲಿಸದೇ ಹಾಗೆಯೇ ಹೋಗಿಬಿಟ್ಟರು . ನಾವು ಆಂಬುಲೆನ್ಸ್ ಗೆ ಕರೆ ಮಾಡಿದೆವು , ಸೇರಿದ ಜನ ಬೈಕ್ ಚಾಲಕನ ಮನೆಗೆ ಕರೆ ಮಾಡಿದರು . ನಂತರ ನಾವು ಬೈಕ್ ಚಾಲಕನನ್ನು ಆಂಬುಲೆನ್ಸ್ ನಲ್ಲಿ ಹತ್ತಿಸಿ ಮನೆಗೆ ಹೋದೆವು . ಕಾರಿನ ನಂಬರ್ ನನಗೆ ಗೊತ್ತಿಲ್ಲ , ಸ್ವಲ್ಪ ಬಿಳಿ ಬಣ್ಣದಾಗಿತ್ತು , ಇನೋವಾ ಕಂಪನಿಯದು ಇರಬಹುದು , ಬೈಕ್ ನಂಬರ್ ನನಗೆ ಗೊತ್ತಿಲ್ಲ . ಕಾರ್ ಚಾಲಕನನ್ನು ನಾನು ನೋಡಿಲ್ಲ . ಬೈಕ್ ಚಾಲಕನನ್ನು ನೋಡಿದ್ದೇನೆ . ಮುಂದೇನಾಯಿತು ನನಗೆ ಗೊತ್ತಿಲ್ಲ . ಸದರಿ ಅಪಘಾತ ಕಾರ್ ಚಾಲಕರು ಒಮಿಂದೊಮ್ಮೆಲೆ ಬ್ರೇಕ್ ಹಾಕಿದ್ದರಿಂದ ಅವರ ತಪ್ಪಿನಿಂದಲೇ ಆಯಿತು . ಅಪಘಾತ ಸ್ಥಳದಲ್ಲಿ ಕಾರ್

ಚಾಲಕರನ್ನು ಸರಿಯಾಗಿ ನೋಡಿಲ್ಲ . ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ . ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ .

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಪ್ರಕರಣದ ವಾಸ್ತವಾಂಶ, ಅಭಿಯೋಜನೆಯ ದಾಖಲೆಗಳು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರೀಶಿಲಿಸಿ ಸಕಾರಣ ಕಂಡು ಬಂದಿದ್ದರಿಂದ ಅನುಮತಿಯನ್ನು ನೀಡಲಾಯಿತು.)

## ಪಾಟೀಸವಾಲು- ಮಾನ್ಯ ಎ. ಪಿ. ಪಿ. ಅವರಿಂದ-

ಕಾರ್ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಕಾರ್ ಚಲಾಯಿಸುತ್ತಿದ್ದರು ಎಂದರೆ ಸರಿ . ಬೈಕ್ ಸವಾರ ಕೂಡ ಅತಿವೇಗ ಮತ್ತು ಅಜಾಗರೂಕತೆಯಿಂದ ಬೈಕ್ ಚಲಾಯಿಸಿ ನನ್ನನ್ನು ಓವರ್ ಟೇಕ್ ಮಾಡಿಕೊಂಡು ಹೋದರು ಎಂದರೆ ಅತಿವೇಗದಿಂದ ಹೋಗುತ್ತಿದ್ದರು , ಅಜಾಗರೂಕತೆಯಿಂದ ಅಲ್ಲ . ಓವರ್ ಹೆಡ್ ವಾಟರ್ ಟ್ಯಾಂಕ್ ಹತ್ತಿರ ಒಂದು ನಾಯಿ ಅಡ್ಡ ಬಂದ ಕಾರಣ ಕಾರ್ ಚಾಲಕರು ಏಕಾಏಕಿ ನಿರ್ಲಕ್ಷ್ಯತೆಯಿಂದ ಬ್ರೇಕ್ ಹಾಕಿದರು ಎಂದರೆ ಸರಿ . ನಿರ್ಲಕ್ಷ್ಯತೆಯಿಂದ ಬ್ರೇಕ್ ಹಾಕಿದ್ದರಿಂದಲೇ ಬೈಕ್ ಚಾಲಕ ವೇಗವಾಗಿ ಹೋಗಿ ಡಿಕ್ಕಿ ಪಡಿಸಿದ ಎಂದರೆ ಸರಿ . ಬೈಕ್ ಚಾಲಕರ ಹಿಂದೆ ಕುಳಿತಿದ್ದ ಚಾಸಾ 2 ರವರಿಗೂ ಗಾಯಗಳಾದವು ಎಂದರೆ ಸರಿ . ಅಪಘಾತ ಪಡಿಸಿದ ಕಾರಿನ ನಂಬರ್ ಕೆ ಎ 37 ಎನ್ 7789 ಆಗಿತ್ತು ಎಂದರೆ ನಾನು ಸರಿಯಾಗಿ ನೋಡಿಲ್ಲ . ಕಾರ್ ಚಾಲಕರನ್ನು ನಾವು ಮಾತನಾಡಿಸಿ , ಅವರು ತಮ್ಮ ಹೆಸರು ರಾಮ್ ರಾವ್ ತಂದೆ ಸುಬ್ಬರಾವ್ ಎಂದು ತಿಳಿಸಿದರು ಎಂದರೆ ಸರಿಯಲ್ಲ . ಬೈಕ್ ಚಾಲಕ ದುರ್ಗೇಶ್ ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಾಗಿ ದಿನಾಂಕಃ 16.08.2023 ರಂದು ಅಲ್ಲಿಯೇ ಮರಣ ಹೊಂದಿದರು ಎಂದರೆ ನನಗೆ ಗೊತ್ತಿಲ್ಲ . ನ್ಯಾಯಾಲಯದ ಮುಂದಿರುವ ಆರೋಪಿಯೇ ಆ ದಿನ ಕಾರ್ ಚಲಾಯಿಸುತ್ತಿದ್ದ ವ್ಯಕ್ತಿ ಎಂದರೆ ಸರಿಯಲ್ಲ, ನಾನು ಆ ದಿನ ಅವರನ್ನು ನೋಡಿಲ್ಲ. ಸ್ಥಳದಲ್ಲಿ ಆರೋಪಿಯನ್ನು ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಸಿ. ಸಿ. ನಂ.- 1132/2023

ಸಿ.ಡಬ್ಲ್ಯೂ.- 3 / ಪಿ.ಡಬ್ಲ್ಯೂ.- 3

ಪಾಟೀಸವಾಲು- ಆರೋಪಿತರ ಪರ ವಕೀಲರಾದ ಶ್ರೀ ಬಿ ಸಿ ಎಂ ರವರಿಂದ-

ನನ್ನ ಮನೆ ಹರ್ಲಾಪುರ ಬಸಾಪುರದ ರಾಜಾರಾಮ್ ಪೇಟೆಯಲ್ಲಿ ಬರುತ್ತದೆ . ನಾನು ಗ್ಯಾರೇಜ್ ಸೂಪರ್ ವೈಸರ್ ಆಗಿ ಶನೇಶ್ವರ ಗುಡಿಯ ಮುಂದೆ ಇರುವ ಗ್ಯಾರೇಜ್ ನಲ್ಲಿ ಕೆಲಸ ಮಾಡುತ್ತೇನೆ . ಸಾಮಾನ್ಯವಾಗಿ ಎಷ್ಟು ಗಂಟೆಯಿಂದ ಎಷ್ಟರವರೆಗೆ ಕೆಲಸ ಮಾಡುತ್ತೀರ ಎಂದರೆ ನಾನು ಅಲ್ಲಿಯೇ ಇರುತ್ತೇನೆ ಎಂದು ನುಡಿಯುತ್ತಾರೆ . ಘಟನಾ ಸ್ಥಳದಿಂದ ನಮ್ಮ ಗ್ಯಾರೇಜು ಸುಮಾರು ಅರ್ಧ ಕಿ.ಮೀಟರ್ ಇದೆ ಎಂದರೆ ಸರಿಯಲ್ಲ , 300 ರಿಂದ 400 ಮೀಟರ್ ಇದೆ . ನಮ್ಮ ಗ್ಯಾರೇಜಿನಿಂದ ನೋಡಿದರೆ ಘಟನಾ ಸ್ಥಳ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ . ಘಟನಾ ಸ್ಥಳವು ಒಂದು ಎನ್ ಹೆಚ್ ಆಗಿದ್ದು ಒಟ್ಟಿಗೆ 3-3 ಗಾಡಿಗಳು ಹೋಗಬಹುದು ಎಂದರೆ ಸರಿ . ಶನಿಮಹಾತ್ಮ ಗುಡಿಯ ಮುಂದೆ ಒಂದು ಡಾಂಬರ್ ರಸ್ತೆ ಇದ್ದು ಅದರಲ್ಲೂ ಸಹ 3-3 ಗಾಡಿಗಳು ಒಟ್ಟಿಗೆ ಹೋಗಬಹುದು ಎಂದರೆ 2 ಗಾಡಿಗಳು ಹೋಗಬಹುದು ಎಂದು ನುಡಿಯುತ್ತಾರೆ . ಹೊಸಪೇಟೆಯಿಂದ ಡ್ಯಾಂ ಕಡೆಗೆ ಹೋಗುವ ರಸ್ತೆ ಶನಿಮಹಾತ್ಮ ಗುಡಿಯ ಮುಂದೆ ಇರುವ ರಸ್ತೆಗೆ ಸೇರುತ್ತದೆ ಎಂದರೆ ಸರಿ . ಎರಡೂ ರಸ್ತೆಗಳು ಸೇರಿದ ಮೇಲೆ ಸ್ವಲ್ಪ ಮುಂದೆ ಹೋದರೆ ವಿ ಟಿ ಸಿ ಟ್ರಾನ್ಸ್ ಪೋರ್ಟ್ ಅವರಿಗೆ ಸೇರಿದ ಮಳಿಗೆಗಳು ಇವೆ ಎಂದರೆ ಸರಿ . ಸದರಿ ಮಳಿಗೆಯ ಪಕ್ಕದಲ್ಲಿಯೇ ಸದಾ ಆರ್ ಟಿ ಓ ನವರು ಹೋಗುತ್ತಿರುವ ಮತ್ತು ಬರುತ್ತಿರುವ ಗಾಡಿಗಳನ್ನು ಚೆಕ್ ಮಾಡುತ್ತಿರುತ್ತಾರೆ ಎಂದರೆ ಸರಿ . ಸದರಿ ಮಳಿಗೆ ಮತ್ತು ಆರ್ ಟಿ ಓ ಕಛೇರಿಯ ಮುಂದೆಯೇ ಘಟನೆ ನಡೆಯಿತು ಎಂದರೆ ಸರಿ .

ನಾನು ಲಾರಿ ಮೆಕಾನಿಕ್ ಶಾಪಿಗೆ ಸೂಪರ್ ವೈಸರ್ . ಮೃತ ದುರ್ಗೇಶ್ , ಚಾಸಾ 2 ಮತ್ತು ನನ್ನ ಅಕ್ಕಪಕ್ಕದ ಊರಿನವರು ಎಂದರೆ ಸರಿ . ಅವರ ಪರಿಚಯ ನನಗೆ ಇಲ್ಲ . ಯಮಹ ಆರ್ ಎಕ್ಸ್ 100 ಬೈಕ್ ಸುಮಾರು ವರ್ಷಗಳ ಹಿಂದೆಯೇ ಬ್ಯಾನ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ . ಹಿಟ್ನಾಳ್ ಗ್ರಾಮದಿಂದ ಹೊಸಪೇಟೆಯ ಅಂಡರ್ ಗ್ರೌಂಡ್ ವರೆಗೆ ಸುಮಾರು 15 ರಿಂದ 20 ಕಿ.ಮೀಟರ್ ಅಂತರವಿದೆ ಎಂದರೆ ಸರಿ . ಯಮಹ ಆರ್ ಎಕ್ಸ್ 100 ಬೈಕ್ ಅನ್ನು ಸಾಮಾನ್ಯ ವಾಗಿ ರೇಸ್ ಗಾಗಿ ಉಪಯೋಗಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ದಿನ ಸ್ವಾತಂತ್ರ್ಯ ದಿನಾಚರಣೆ

ಆಗಿತ್ತು ಎಂದರೆ ಸರಿ . ಸದರಿ ದಿನ ಗೂಂಡಾ ಫಾರೆಸ್ಟ್ ಅನ್ನು , ಹಿನ್ನೀರನ್ನು ನೋಡಲು ಹಿಟ್ನಾಳ್ ,ಹುಲಿಗಿ , ಕೊಪ್ಪಳದಿಂದ ಬೆಳಗ್ಗೆ ಯಿಂದಲೇ ಜನರು ಬರುತ್ತಾರೆ ಆದ್ದರಿಂದ ರಸ್ತೆ ಜನಜಂಗುಳಿಯಿಂದ ಕೂಡಿರುತ್ತದೆ ಎಂದರೆ ಸರಿ .

ಸಾಕ್ಷಿಗೆ ನಿ.ಪಿ 8 ರ ಬೈಕಿನ ಫೋಟೋವನ್ನು ತೋರಿಸಿ ಕೇವಲ ಮುಂದಿನ ಬಾಗ ಜಖಂ ಆಗಿದೆ ಎಂದರೆ ಸರಿ ಎಂದು ನುಡಿಯುತ್ತಾರೆ . ಈತರದ ಜಖಂ ವೀಲಿಂಗ್ ಮಾಡಿದಾಗ ಆಗುತ್ತದೆ ಎಂದರೆ ಸದರಿ ಘಟನೆಯಲ್ಲಿ ವೀಲಿಂಗ್ ಆಗಿಲ್ಲ ಎಂದು ನುಡಿಯುತ್ತಾರೆ . ಸಾಕ್ಷಿಗೆ ನಿ.ಪಿ 9ರ ಕಾರಿನ ಫೋಟೋಗಳನ್ನು ತೋರಿಸಿ ಕೇವಲ ಕಾರಿನ ಗಾಜಿಗೆ ನಷ್ಟವಾಗಿದೆ , ಕೆಳಗಡೆ ಏನೂ ಆಗಿಲ್ಲ ಎಂದರೆ ಸರಿ . ಬೈಕ್ ಅನ್ನು ವೀಲಿಂಗ್ ಮಾಡಿ ಮುಂದಿನ ಚಕ್ರವನ್ನು ಕಾರಿನ ಮೇಲೆ ಹತ್ತಿಸಿದಾಗಲೇ ಕಾರಿನ ಗಾಜು ಈ ರೀತಿ ಆಗಲು ಸಾಧ್ಯ ಎಂದರೆ ಸರಿಯಲ್ಲ . ಆರ್ ಟಿ ಓ ಚೆಕ್ ಪೋಸ್ಟ್ ಇರುವ ಕಾರಣ ಎಲ್ಲಾ ಗಾಡಿಗಳು ಅಲ್ಲಿ ನಿಧಾನವಾಗಿಯೇ ಚಲಿಸುತ್ತವೆ ಎಂದರೆ ಕೆಲವೊಬ್ಬರು ವೇಗವಾಗಿಯೂ ಹೋಗುತ್ತಾರೆ ಎಂದು ನುಡಿಯುತ್ತಾರೆ . ಸದರಿ ದಿನ ಕಾರ್ ಚಾಲಕರು ಆರ್ ಟಿ ಓ ಚೆಕ್ ಪೋಸ್ಟ್ ಇರುವ ಕಾರಣ ನಿಧಾನವಾಗಿಯೇ ಹೋಗುತ್ತಿದ್ದರೂ ಬೈಕ್ ಚಾಲಕನೇ ವೀಲಿಂಗ್ ಮಾಡಿಕೊಂಡು ಅತಿವೇಗವಾಗಿ ಬಂದು ಕಾರಿಗೆ ಹಿಂದಿನಿಂದ ಡಿಕ್ಕಿಪಡಿಸಿದರು ಎಂದರೆ ಸರಿಯಲ್ಲ . ಸದರಿ ದಿನ ನಾನು ಗ್ಯಾರೇಜಿನಲ್ಲಿಯೇ ಇದ್ದು ಘಟನೆಯನ್ನು ನೋಡದೇ ಇದ್ದರೂ ನಮ್ಮ ಪಕ್ಕದ ಊರಿನವರಾದ ಚಾ.ಸಾ. 2 ಮತ್ತು 1 ನೇ ಆರೋಪಿಗೆ ಪರಿಹಾರ ಹಣ ಸಿಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಬೈಕ್ ಚಾಲಕನೇ ವೇಗವಾಗಿ ಬಂದಿದ್ದು ಆರೋಪಿ 2 ರವರ ತಪ್ಪು ಇಲ್ಲ ಎಂದರೆ ಸರಿಯಲ್ಲ .

ಕಾರ್ ಚಾಲಕರು ಬೈಕ್ ನಲ್ಲಿದ್ದ ಹುಡುಗರನ್ನು ಉಪಚರಿಸಿ ,ಫೋನ್ ಮಾಡಿ , ಆಂಬುಲೆನ್ಸ್ ಕರೆಯಿಸಿ ಕಳುಹಿಸಿದರು ಎಂದರೆ ಸರಿಯಲ್ಲ . ನಾನು ಪೊಲೀಸ್ ಠಾಣೆಗೆ ಹೋಗಿ ಹೇಳಿಕೆಯನ್ನು ಕೊಟ್ಟಿದ್ದೇನೆ. ಆ ಹೇಳಿಕೆಯಲ್ಲಿ ಪೊಲೀಸರು ಏನು ಬರೆದಿದ್ದಾರೆ ಎಂದು ನನಗೆ ಗೊತ್ತು . ಈ ರೀತಿ ನಾನು ಅಕ್ಕಪಕ್ಕದ ಊರಿನವರಿಗೆ ಸಹಾಯ ಮಾಡಲು ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಸಿ. ಸಿ. ನಂ.- **1132/2023**

ಸಿ.ಡಬ್ಲ್ಯೂ.- **3** / ಪಿ.ಡಬ್ಲ್ಯೂ.- **3**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.